# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

( ಸಂಪೂರ್ಣ ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)

Email: aochandapura@gmail.com

ದೂರವಾಣಿ ಸಂಖ್ಯೆ:9448279027/ 9449865127

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಬೆವಿಕಂ, ಚಂದಾಪುರ ವಿಭಾಗ ರವರ ಕಛೇರಿ
ನಂ.204, ಪಾರ್ಕ್ ರೋಡ್, ಸೂರ್ಯನಗರ ಫೇಸ್.1
ಚಂದಾಪುರ, ಆನೇಕಲ್ ತಾ॥ ಬೆಂಗಳೂರು.91

ಲಗತ್ತು:

**==========**======================================*****========================*****************=========**=

ಸಂ:-ಕಾನಿಇಂ/ಚಂ/ಲೆ/ಸಲೆ/ಹಿಸ/ಸ/2025-26/ 13655

ದಿನಾಂಕ:- 2 MAR 2026

ಗೆ,
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಬೆವಿಕಂ, ಕಾ ಮತ್ತು ಪಾ ಉಪ ವಿಭಾಗ,
ಅತ್ತಿಬೆಲೆ.

ಮಾನ್ಯರೆ,

**ವಿಷಯ:-** ಸ್ಥಾವರ ಸಂಖ್ಯೆ **AKLHT-163** ಸ್ಥಾವರದ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತವನ್ನು ಗ್ರಾಹಕರಿಗೆ ಹಿಂಪಾವತಿಸುವ ಬಗ್ಗೆ.

**ಉಲ್ಲೇಖ:**
1. ಸ.ಕಾ.ನಿ(ವಿ)/ಅತ್ತಿಬೆಲೆ/ಸ.ಲೆ/436 ದಿನಾಂಕ 06-05-2025.
2. ಲೆಕ್ಕಾಧಿಕಾರಿ (ಆಂ.ಪ)/ಚಂದಾಪುರ/158-159 ದಿನಾಂಕ 11-07-2025.
3. ಅಇಂ(ವಿ)/ರಾವೃ/ಉಲೆನಿ/ಲೆ/ಸಲೆ/ಹಿಸ/ಸ2/2025-26/5604-05 ದಿನಾಂಕ: 16.10.2025.
4. ಮುಇಂ(ವಿ)/ಲೆಇ/ಲೆ/ಸಲೆ/ಸ-4/ಕ-30(7)/2025-26/7259-63 ದಿನಾಂಕ: 17-11-2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,ಅತ್ತಿಬೆಲೆ ಉಪವಿಭಾಗದ ವ್ಯಾಪ್ತಿಯ **"M/S POINTEC PENS AND ENERGY PVT LIMITED"** ರವರ ಆರ್.ಆರ್ ಸಂಖ್ಯೆ: **AKLHT-163** ರ ಗ್ರಾಹಕರು **03-11-1996** ರಲ್ಲಿ **HT2A** ಜಕಾತಿಯಲ್ಲಿ **900 KVA** ಹೊರೆಗೆ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ. ಗ್ರಾಹಕರ ಕೋರಿಕೆ ಮೇರಿಗೆ ಸದರಿ ಸ್ಥಾವರದ ಸಂಪರ್ಕಿತ ಹೊರೆಯು ಗ್ರಾಹಕರ ಕೋರಿಕೆ ಮೇರಿಗೆ ಸದರಿ ಸ್ಥಾವರದ ಸಂಪರ್ಕಿತ ಹೊರೆಯು 250 ಕೆವಿಎ ಯಿಂದ 25 ಕೆವಿಎ ಇಳಿಕೆಯಾಗಿರುತ್ತದೆ. ಸ್ಥಾವರ ಸಂಖ್ಯೆ AKLHT-163 ರ ಗ್ರಾಹಕರು ಅರ್ಜಿ ಸಲ್ಲಿಸಿ ತಮ್ಮ ಸ್ಥಾವರದ ವಿದ್ಯುತ್ ಸಂಪರ್ಕಿತ ಹೊರೆಯು ಇಳಿಸಿಕೊಂಡಿದ್ದು, ಈ ಹಿನ್ನಲೆಯಲ್ಲಿ ಖಾತೆಯಲ್ಲಿರುವ ಭದ್ರತಾ ಠೇವಣಿ ರೂ. 42,57,770/- ರಲ್ಲಿ 25 ಕೆವಿಎ ಬೇಕಾಗುವ ಭದ್ರತಾ ಠೇವಣಿ ಮೊತ್ತವನ್ನು ಬಾಕಿ ಉಳಿಸಿ ಹೆಚ್ಚುವರಿಯಾಗಿ ಇರುವ ಭದ್ರತಾ ಠೇವಣಿ ಮೊತ್ತವನ್ನು ಹಿಂಪಾವತಿಸಲು ಕೋರಿರುತ್ತಾರೆ. ಉಲ್ಲೇಖ(2) ರಲ್ಲಿ ಸ್ಥಾವರ ಸಂಖ್ಯೆ AKLHT-163 ರ ಪ್ರಸ್ತುತ ಹೊರೆಯ ಅನುಗುಣವಾಗಿ ಲೆಕ್ಕಚಾರ ಮಾಡಿ ಹೆಚ್ಚುವರಿಯಾಗಿ ಪಾವತಿಸಿರುವ ಭದ್ರತಾ ಠೇವಣಿ ರೂ.38,01,542/- ಗಳನ್ನು ಗ್ರಾಹಕರಿಗೆ ಹಿಂಪಾವತಿ ಮಾಡಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಅತ್ತಿಬೆಲೆ ಉಪವಿಭಾಗರವರು ಪ್ರಸ್ತಾವನೆಯನ್ನು ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಿರುತ್ತಾರೆ.

ಮುಂದುವರೆದು ಸದರಿ ಪ್ರಸ್ತಾವನೆಯನ್ನು ಉಲ್ಲೇಖ(2-3) ರಲ್ಲಿ ಲೆಕ್ಕಾಧಿಕಾರಿ(ಆಂಪ), ಬೆವಿಕಂ, ಚಂದಾಪುರ ವಿಭಾಗ ಮತ್ತು ಅಧೀಕ್ಷಕ ಇಂಜಿನಿಯರ್(ವಿ), ಬೆವಿಕಂ, ಕಾ ಮತ್ತು ಪಾ, ರಾಮನಗರ ವೃತ್ತ ರವರ ದೃಢೀಕರಣದ ಮೇರೆಗೆ ಮುಖ್ಯ ಇಂಜಿನಿಯರ್(ವಿ), ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ, ಬೆವಿಕಂ, ರವರ ಅನುಮೋದನೆ ಪಡೆದು, ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ ಮತ್ತು ಸಂ), ನಿಗಮ ಕಾರ್ಯಾಲಯ ರವರ ಕಛೇರಿಯಲ್ಲಿ ಸದರಿ ಸ್ಥಾವರ ಸಂಖ್ಯೆ: **AKLHT-163** ರ ಭದ್ರತಾ ಠೇವಣಿ ಮೊತ್ತ **ರೂ. 38,01,542/-**(ಮೂವತ್ತೆಂಟು ಲಕ್ಷದ ಒಂದು ಸಾವಿರ ಐದು ನೂರು ನಲವತ್ತೆರಡು ಮಾತ್ರ) ರೂಪಾಯಿ ಗಳನ್ನು ಆರ್.ಟಿ.ಜಿ.ಎಸ್ ಸಂಖ್ಯೆ: **2198** ದಿನಾಂಕ **15-12-2025** (Cash Book CBV Number 126 ದಿನಾಂಕ 31/12/2025 ) ಮೂಲಕ ಗ್ರಾಹಕರಿಗೆ ಮರುಪಾವತಿಸಲಾಗಿದೆ. ಗ್ರಾಹಕರಿಗೆ ನೀಡಿರುವ ಆರ್.ಟಿ.ಜಿ.ಸ್ ಸಂಖ್ಯೆ ಹಾಗೂ ದಿನಾಂಕವನ್ನು ಗಣಕಯಂತ್ರದಲ್ಲಿನ ಗ್ರಾಹಕರ ಖಾತೆಯಲ್ಲಿ ದಾಖಲು ಮಾಡುವುದು ಮತ್ತು ತಂತ್ರಾಂಶದಲ್ಲಿ ಠೇವಣಿ ಮೊತ್ತವನ್ನು ಶೂನ್ಯ ಮಾಡುವುದು.

SA Kirankumar / Cashier

02/03/26

ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಬೆ.ವಿ.ಕಂ,ಚಂದಾಪುರ.

ಪ್ರತಿಗಳು:
1. ಲೆಕ್ಕಾಧಿಕಾರಿ(ಆಂ.ಪ), ಚಂದಾಪುರ ವಿಭಾಗ ರವರ ದಯಾಪರ ಮಾಹಿತಿಗಾಗಿ.
2. ವಿಷಯ ನಿರ್ವಾಹಕರು / ಮು.ಕ.

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

( ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

| | |
|---|---|
| ಸಂಖ್ಯೆ: ಮುಇಂ(ವಿ)/ಲೆನಿ/ಲೆ/ಸಲೆ/ಸ-4/ಕ-30(7)/2025-26/<br>ಅಗತ್ತು:<br>ಈ-ಮೇಲ್ ವಿಳಾಸ: cebraz.work@gmail.com | ಮುಖ್ಯ ಇಂಜಿನಿಯರ್(ವಿ) ರವರ ಕಛೇರಿ,<br>ಬೆ.ವಿ.ಕಂ ಕಾ ಮತ್ತು ಪಾ, ಬೆಂ.ಗ್ರಾ.ಕ್ಷೇ.ವ<br>ಐ.ಟಿ ಪಾರ್ಕ್, 5ನೇ ಮಹಡಿ, ನಂ: 1-4<br>ರಾಜಾಜಿನಗರ ಕೈಗಾರಿಕಾ ಪ್ರದೇಶ,<br>ರಾಜಾಜಿನಗರ, ಬೆಂಗಳೂರು-560044.<br>ದಿನಾಂಕ:17.11.2025 |

ವಿಷಯ: ಚಂದಾಪುರ ವಿಭಾಗ, ಆತ್ತಿಬೆಲೆ ಉಪ ವಿಭಾಗದ M/s.Pointec Pens & Energy Pvt Ltd., ರವರ ಸ್ಥಾವರ ಸಂಖ್ಯೆ: AKLHT163 ರ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತವನ್ನು ಗ್ರಾಹಕರಿಗೆ ಹಿಂಪಾವತಿಸುವ ಬಗ್ಗೆ.

ಉಲ್ಲೇಖ:1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ ಚಂದಾಪುರ ವಿಭಾಗ ಕಛೇರಿ, ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: EEE/CDP/AEE(O)/AE(T)/2024-25/8508-10/dt: 18.09.2024.

2. ಗ್ರಾಹಕರ ಮನವಿ ಅರ್ಜಿ ದಿನಾಂಕ:17.01.2025.

3. ಅಧೀಕ್ಷಕ ಇಂಜಿನಿಯರ್(ವಿ), ಬೆವಿಕಂ, ರಾಮನಗರ ವೃತ್ತ ರವರ ಪತ್ರ ಸಂಖ್ಯೆ: ಅಇಂ(ವಿ)/ರಾವೃ/ಉಲೆನಿ/ಲೆ/ಸಲೆ/ಹಿಸ/ಸ-2/2025-26/3337-38/ದಿನಾಂಕ:26.08.2025.

4. ಈ ಕಛೇರಿಯ ಪತ್ರ ಸಂಖ್ಯೆ: ಮುಇಂ(ವಿ)/ಲೆನಿ/ಲೆ/ಸಲೆ/ಸ-4/ಕ-30(8)/2025-26/5080-81/ದಿನಾಂಕ: 10.09.2025.

5. ಅಧೀಕ್ಷಕ ಇಂಜಿನಿಯರ್(ವಿ), ಬೆವಿಕಂ, ರಾಮನಗರ ವೃತ್ತ ರವರ ಪತ್ರ ಸಂಖ್ಯೆ: ಅಇಂ(ವಿ)/ರಾವೃ/ಉಲೆನಿ/ಲೆ/ಸಲೆ/ಹಿಸ/ಸ-2/2025-26/5604-05/ದಿನಾಂಕ:16.10.2025.

ಪೀಠಿಕೆ:-

1. ಚಂದಾಪುರ ವಿಭಾಗ, ಆತ್ತಿಬೆಲೆ ಉಪ ವಿಭಾಗದ M/s.Pointec Pens & Energy Pvt Ltd, ರವರ ಹೆಸರಿನಲ್ಲಿರುವ ಸ್ಥಾವರ ಸಂಖ್ಯೆ: AKLHT163ಕ್ಕೆ ದಿನಾಂಕ:03.11.1996 ರಂದು ಹೆಚ್‌ಟಿ2ಎ ಜಕಾತಿ ಅಡಿಯಲ್ಲಿ 900 ಕೆ.ವಿ.ಎ. ಹೊರೆಯೊಂದಿಗೆ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ.

2. ಗ್ರಾಹಕರ ಕೋರಿಕೆ ಮೇರೆಗೆ ಸದರಿ ಸ್ಥಾವರದ ವಿದ್ಯುತ್ ಪ್ರಮಾಣವನ್ನು 900 ಕೆವಿಎ ಇಂದ 25 ಕೆವಿಎಗೆ ವಿದ್ಯುತ್ ಹೊರೆ ಕಡಿಮೆ ಮಾಡಲು ಉಲ್ಲೇಖಿತ (1) ರಲ್ಲಿ ಕಾರ್ಯನಿರ್ಚಾಹಕ ಇಂಜಿನಿಯರ್(ವಿ), ಬೆವಿಕಂ, ಚಂದಾಪುರ ವಿಭಾಗ ರವರು ಅಧಿಕೃತ ಜ್ಞಾಪನದಲ್ಲಿ ಆದೇಶ ಹೊರಡಿಸಿರುತ್ತಾರೆ.

3. ಉಲ್ಲೇಖ(2) ರಲ್ಲಿ ಸ್ಥಾವರದ ಗ್ರಾಹಕರು ವಿದ್ಯುತ್ ಪ್ರಮಾಣವನ್ನು 900 ಕೆವಿಎ ಇಂದ 25 ಕೆವಿಎಗೆ ವಿದ್ಯುತ್ ಹೊರೆಯನ್ನು ಕಡಿಮೆ ಮಾಡಿರುವುದರಿಂದ ಸಂಪರ್ಕ ಹೊಂದುವಾಗ ಪಾವತಿಸಿರುವ ₹:42,57,770/- ಗಳ ಭದ್ರತಾ ಠೇವಣಿ ಮೊತ್ತದಲ್ಲಿ ಪ್ರಸ್ತುತ ಹೊರೆಯ ಅನುಗುಣಾವಾಗಿ ಅವಶ್ಯಕತೆ ಇರುವ ಭದ್ರತಾ ಠೇವಣಿ ಮೊತ್ತವನ್ನು ಉಳಿಸಿಕೊಂಡು ಹೆಚ್ಚುವರಿಯಾಗಿ ಇರುವ ಭದ್ರತಾ ಠೇವಣಿ ಮೊತ್ತವನ್ನು ಹಿಂಪಾವತಿಸಲು ಕೋರಿರುತ್ತಾರೆ.

4. ಕೆಇಆರ್‌ಸಿ ವಿದ್ಯುತ್ ಸರಬರಾಜು ಮತ್ತು ವಿತರಣಾ ನಿಯಮಾವಳಿ ಕಂಡಿಕೆ 34.04 ಅನುಸಾರ, ಗ್ರಾಹಕರು ಸ್ಥಾವರದ ವಿದ್ಯುತ್ ಭಾರವನ್ನು ಇಳಿಕೆ ಮಾಡಿಸಿದ ಸಂದರ್ಭದಲ್ಲಿ, ಇಳಿಕೆಗೊಂಡ ವಿದ್ಯುತ್ ಭಾರಕ್ಕೆ ಅನುಗುಣವಾಗಿ ನಿಯಮಾನುಸಾರ ಭದ್ರತಾ ಠೇವಣಿ ಮೊತ್ತವನ್ನು ಉಳಿಸಿಕೊಂಡು ಹೆಚ್ಚುವರಿ ಭದ್ರತಾ ಠೇವಣಿ ಮೊತ್ತವನ್ನು ಗ್ರಾಹಕರಿಗೆ ಹಿಂಪಾವತಿ ಮಾಡಬೇಕಾಗಿರುತ್ತದೆ. ಈ ಸಂಬಂಧ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಅತ್ತಿಬೆಲೆ ಉಪ-ವಿಭಾಗ ರವರು ಪ್ರಸ್ತುತ ಹೊರೆಯ ಅನುಗುಣವಾಗಿ ಲೆಕ್ಕಾಚಾರ ಮಾಡಿ ಹೆಚ್ಚುವರಿಯಾಗಿ ಕಂಡುಬಂದಿರುವ ಭದ್ರತಾ ಠೇವಣಿ ಮೊತ್ತ ₹:38,01,542/- (₹ ಮೂವತ್ತೆಂಟು ಲಕ್ಷದ ಒಂದು ಸಾವಿರದ ಐದು ನೂರ ನಲವತ್ತೆರಡು ಮಾತ್ರ) ಗಳನ್ನು ಗ್ರಾಹಕರ ಕೋರಿಕೆ ಮೇರೆಗೆ ಹಿಂಪಾವತಿಸಲು ಪ್ರಸ್ತಾವನೆಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ, ಕಾ ಮತ್ತು ಪಾ ವಿಭಾಗ, ಚಂದಾಪುರ, ರವರ ಕಛೇರಿಗೆ ಸಲ್ಲಿಸಿರುತ್ತಾರೆ.

5. ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ, ಕಾ ಮತ್ತು ಪಾ ವಿಭಾಗ, ಚಂದಾಪುರ, ರವರು ಲೆಕ್ಕಾಧಿಕಾರಿ (ಆಂ.ಪ.), ಬೆವಿಕಂ, ಚಂದಾಪುರ ವಿಭಾಗ ರವರಿಂದ ಪರಿಶೀಲನೆಗೊಳಪಡಿಸಿ, ದೃಢೀಕರಿಸಿದ್ದು, ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಅಧೀಕ್ಷಕ ಇಂಜಿನಿಯರ್(ವಿ), ಬೆವಿಕಂ, ಕಾ ಮತ್ತು ಪಾ ವೃತ್ತ, ರಾಮನಗರ ವೃತ್ತ, ರವರ ಕಛೇರಿಗೆ ಸಲ್ಲಿಸಿರುತ್ತಾರೆ.

6. ಸದರಿ ಪ್ರಸ್ತಾವನೆಯನ್ನು ಅಧೀಕ್ಷಕ ಇಂಜಿನಿಯರ್(ವಿ), ಬೆವಿಕಂ, ಕಾ ಮತ್ತು ಪಾ ವೃತ್ತ, ರಾಮನಗರ ವೃತ್ತ, ರವರು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

7. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಕೇಲವು ನ್ಯೂನತೆಗಳು ಕಂಡುಬಂದಿರುತ್ತದೆ, ಸದರಿ ನ್ಯೂನತೆಗಳನ್ನು ಸರಿಪಡಿಸಿ ಮರು ಸಲ್ಲಿಸುವಂತೆ ಸೂಚಿಸಿ ಪ್ರಸ್ತಾವನೆಯನ್ನು ಉಲ್ಲೇಖಿತ (4) ರ ಈ ಕಛೇರಿಯ ಪತ್ರದಲ್ಲಿ ಹಿಂತಿರುಗಿಸಲಾಗಿತ್ತು.

8. ಅಧೀಕ್ಷಕ ಇಂಜಿನಿಯರ್(ವಿ), ಬೆವಿಕಂ, ಕಾ ಮತ್ತು ಪಾ ವೃತ್ತ, ರಾಮನಗರ ವೃತ್ತ, ರವರು ನ್ಯೂನತೆಗಳನ್ನು ಸರಿಮಡಿಸಿ ಮತ್ತೊಮೆ ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

9. ಬೆವಿಕಂ, ಅಧಿಕಾರಿಗಳ ಅಧಿಕಾರ ಆರ್ಥಿಕ ನಿಯೋಜನೆ/ಪ್ರತ್ಯಾಯೋಜನೆ 2023ರ ಪುಟ ಸಂಖ್ಯೆ 26ರಲ್ಲಿ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ರವರಿಗೆ ₹.5,00,000/- ಕ್ಕೂ ಮೇಲ್ಪಟ್ಟ ಭದ್ರತಾ ಠೇವಣಿಯನ್ನು ಆಂತರಿಕ ಪರಿಶೋಧನೆಗೊಳಪಡಿಸಿದ ನಂತರ ಹಿಂಪಾವತಿ ಮಾಡುವ ಪೂರ್ಣ ಪ್ರದತ್ತವಾದ ಅಧಿಕಾರ ಮುಖ್ಯ ಇಂಜಿನಿಯರ್(ವಿ) ರವರಿಗೆ ನೀಡಲಾಗಿರುವ ಹಿನ್ನೆಲೆಯಲ್ಲಿ, ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

## ಆದೇಶ

17 NOV 2025

**ಸಂಖ್ಯೆ: ಮುಇಂ(ವಿ)/ಲೆನಿ/ಲೆ/ಸಲೆ/ಸ-3/ಕ-30(8)/2025-26/** 7859-63 **ದಿನಾಂಕ: 17-11-2025**

ಬೆ.ವಿ.ಕಂ, ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಕೈಪಿಡಿ 2023ರ ಪುಟ ಸಂಖ್ಯೆ 26ರಲ್ಲಿ ಕಂದಾಯ (1)ರ ಪ್ರಕಾರ ದತ್ತವಾದ ಅಧಿಕಾರ ಚಲಾಯಿಸಿ, ಕಾರ್ಯನಿರ್ವಾಹಕ ಇಂಜನಿಯರ್(ವಿ), ಬೆವಿಕಂ, ಚಂದಾಪುರ ವಿಭಾಗ ಮತ್ತು ಲೆಕ್ಕಾಧಿಕಾರಿ(ಆಂಪ), ಬೆವಿಕಂ, ಚಂದಾಪುರ ವಿಭಾಗ ರವರ ಆಂತರಿಕ ಪರಿಶೋಧನೆಯ ದೃಢಿಕರಿಸಿ ಭದ್ರತಾ ಠೇವಣಿ ಒಟ್ಟು ಮೊತ್ತ ₹:42,57,770 ಗಳಲ್ಲಿ ಪ್ರಸ್ತುತ ವಿದ್ಯುತ್ ಹೊರೆಯ ಅನುಗುಣವಾಗಿ ಸ್ಥಾವರದ ಭದ್ರತಾ ಠೇವಣಿ ಮೊತ್ತವನ್ನು ಉಳಿಸಿಕೊಂಡು, ಹೆಚ್ಚುವರಿಯಾಗಿ ಉಳಿದಿರುವ ಭದ್ರತಾ ಠೇವಣಿ ಮೊತ್ತ ಭದ್ರತಾ ಠೇವಣಿ ಮೊತ್ತ ₹:38,01,542/- (ರೂ ಮೂವತ್ತೆಂಟು ಲಕ್ಷದ ಒಂದು ಸಾವಿ... ಐದು ನೂರ ನಲವತ್ತೆರಡು ಮಾತ್ರ) ಗಳನ್ನು ಸ್ಥಾವರ ಸಂಖ್ಯೆ: AKLHT163 ರ ಗ್ರಾಹಕರಿಗೆ ಹಿಂಪಾವತಿಸಲು ಈ ಮೂಲಕ ಅನುಮೋದನೆ ನೀಡಲಾಗಿದೆ.

**ಸೂಚನೆ :**

ಮೇಲ್ಕಂಡ ಹಿಂಪಡೆದಿರುವ ಮೊತ್ತವನ್ನು ಎರಡನೇ ಬಾರಿ ಹಿಂಪಡೆಯುವುದನ್ನು ತಡೆಯಲು ಸಂಬಂಧಪಟ್ಟ ರಿಜಿಸ್ಟರ್ ಮತ್ತು ಗಣಕಯಂತ್ರದಲ್ಲಿ ಅಧಿಕೃತ ಜ್ಞಾಪನಾ ಸಂಖ್ಯೆಯನ್ನು/ಜೆ.ವಿ/ಚೆಕ್ ಸಂಖ್ಯೆಯನ್ನು ನಮೂದಿಸಲು ಸೂಚಿಸಿದೆ.

17-11-2025

ಮುಖ್ಯ ಇಂಜಿನಿಯರ್(ವಿ),
ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ,
ಬೆವಿಕಂ, ಬೆಂಗಳೂರು

ಪ್ರತಿಗಳು :

1) ಪ್ರಧಾನ ವ್ಯವಸ್ಥಾಪಕರು(ಕಂದಾಯ), ಬೆವಿಕಂ, ಕಂಪನಿ ಕಾರ್ಯಾಲಯ, ಕೆ.ಆರ್ ವೃತ್ತ, ರವರ ಮಾಹಿತಿಗಾಗಿ.
2) ಅಧೀಕ್ಷಕ ಇಂಜಿನಿಯರ್(ವಿ), ಬೆ.ವಿ.ಕಂ, ಕಾ ಮತ್ತು ಪಾ ವೃತ್ತ, ರಾಮನಗರ ವೃತ್ತ, ಕೆಂಗೇರಿ, ಬೆಂಗಳುರು ರವರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ, ಕಾ ಮತ್ತು ಪಾ ವಿಭಾಗ, ಚಂದಾಪುರ ರವರ ಮಾಹಿತಿ ಹಾಗೂ ಮೂಲಕಡತವನ್ನು ಮುಂದಿನ ಕ್ರಮಕ್ಕಾಗಿ ಲಗತ್ತಿಸಲಾಗಿದೆ.
4) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ, ಕಾ ಮತ್ತು ಪಾ ಉಪ-ವಿಭಾಗ, ಅತ್ತಿಬೆಲೆ ಉಪ ವಿಭಾಗ ರವರು ಸಂಬಂಧಪಟ್ಟ ರಿಜಿಸ್ಟರ್ ಮತ್ತು ಗಣಕಯಂತ್ರದಲ್ಲಿ ಅಧಿಕೃತ ಜ್ಞಾಪನಾ ಸಂಖ್ಯೆ ವಿವರಗಳನ್ನು ನಮೂದಿಸಲು ಸೂಚಿಸಲಾಗಿದೆ.
5) ಲೆಕ್ಕಾಧಿಕಾರಿ (ಆಂ.ಪ), ಬೆವಿಕಂ, ಕಾ ಮತ್ತು ಪಾ ವಿಭಾಗ, ಚಂದಾಪುರ ವಿಭಾಗ ರವರ ಮಾಹಿತಿಗಾಗಿ.

AFB